**O.S. No. 557 /2017**
**ಪಿ.ಡಬ್ಲ್ಯು-01**

**<u>ಸಾಕ್ಷಿಯನ್ನು ದಿನಾಂಕ 23.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀವಾಲುಃ ಪ್ರತಿವಾದಿಗಳ ಪರ ಶ್ರೀ ಕೆ.ಎಂ.ಆರ್, ವಕೀಲರಿಂದಃ</u>**

ನಾನು 7 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಾನು 2011 ರಿಂದ ಹಾಲಿನ ಡೈರಿಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ. ನನ್ನ ಮಾವ ಕೆಂಪನಂಜಪ್ಪರವರ ತಂದೆಯ ಹೆಸರು ಚಿಕ್ಕಮಾದಪ್ಪ. ಸದರಿ ಚಿಕ್ಕಮಾದಪ್ಪರವರಿಗೆ ಇಬ್ಬರು ಗಂಡುಮಕ್ಕಳು ಮತ್ತು ಇಬ್ಬರು ಹೆಣ್ಣು ಮಕ್ಕಳು. ನನ್ನ ಚಿಕ್ಕ ಮಾವನ ಹೆಸರು ಬಸಪ್ಪ ಆಗಿರುತ್ತಾರೆ. 1 ಮತ್ತು 2 ನೇ ಪ್ರತಿವಾದಿಗಳು ಸದರಿ ಬಸಪ್ಪರವರ ಮಕ್ಕಳಾಗಿರುತ್ತಾರೆ ಎಂದರೆ ಸರಿ. ನನ್ನ ಮಾವನ ತಂದೆ ಚಿಕ್ಕಮಾದಪ್ಪರವರಿಗೆ ಒಟ್ಟು 5 ಎಕರೆ ಆಸ್ತಿ ಇತ್ತು. ಸದರಿ 5 ಎಕರೆ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿಯಿರುವುದಿಲ್ಲ. 2 ನೇ ಐಟಂ ದಾವಾ ತಪಶೀಲು ಸ್ವತ್ತನ್ನು ನನ್ನ ಮಾವ ಖರೀದಿಸಿರುತ್ತಾರೆ. ಈ ರೀತಿ ಖರೀದಿಸಿರುತ್ತಾರೆಂದು ತೋರಿಸಲು ದಾಖಲೆ ಹಾಜರುಪಡಿಸಿರುತ್ತೀರಾ ಎಂದರೆ ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ.

1 ಮತ್ತು 2 ನೇ ಪ್ರತಿವಾದಿಗಳು ನಂಜನಗೂಡಿನ ಗೌರವಾನ್ವಿತ ಹಿರಿಯ ದಿವಾನಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮೂಲದಾವೆ ಸಂಖ್ಯೆ 125/2017 ರಂತೆ ವಿಭಾಗ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನು ದಾಖಲಿಸಿದ ನಂತರ ಈ ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿ. ಈ ದಾವೆಯ ದಾವಾ ಸ್ವತ್ತುಗಳನ್ನು ಸೇರಿಸಿ 1 ಮತ್ತು 2 ನೇ ಪ್ರತಿವಾದಿಗಳು ಈ ಮೇಲೆ ಹೇಳಿದಂತೆ ಹಿರಿಯ ದಿವಾನಿ ನ್ಯಾಯಾಧೀಶರ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆ ಇತ್ಯರ್ಥಕ್ಕಾಗಿ ಬಾಕಿಯಿರುತ್ತದೆ ಎಂದರೆ ಸರಿ.

ಪಿ.ಡಬ್ಲ್ಯು-01

ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರು ಮುಂದಿನ ಪಾಟೀಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಸಹಿ/-

ಪ್ರಧಾನ ದಿವಾನಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ,

ನಂಜನಗೂಡು.